UNIVERSITY LIBRARY
SATURDAY 05-07-2025
Agri Newspaper Clippings
For more information visit University Library Website
Web - uasbagrilibindia.org
E-mail- librarian@uasbangalore.edu.in

ವಿ ರೈತ ಮಿತ್ರ

ಬಯೋಡೈಜೆಸ್ಟರ್ ದ್ರವ ಗೊಬ್ಬರವನ್ನು ಮೌಲ್ಯವರ್ಧನೆ ಮಾಡುವುದು ಹೇಗೆ?

ಲಲಿತ್ ಕುಮಾರ್ ಗೌರಿಬಿದನೂರು

ಬಯೋಡೈಜೆಸ್ಟರ್ ದ್ರವ ಗೊಬ್ಬರದಲ್ಲಿ ಪೋಷಕಾಂಶಗಳ ಪ್ರಮಾಣವು ಕಡಿಮೆಯಿರುವುದರಿಂದ ಮೌಲ್ಯವರ್ಧನೆ ಮಾಡುವುದು ಸೂಕ್ತ. ವಿವಿಧ ಹಿಂಡಿಗಳಾದ ಬೇವಿನ ಹಿಂಡಿ, ಹೊಂಗೆ ಹಿಂಡಿ, ಶೇಂಗಾ ಹಿಂಡಿ, ಹರಳಿನ ಹಿಂಡಿ, ಪ್ರಾಣಿಗಳ



ತ್ಯಾಜ್ಯಗಳಾದ ಗೋಮೂತ್ರ, ಸಗಣಿ, ರೇಷ್ಮೆ ಹುಳುವಿನ ಹಿಕ್ಕೆ, ಮೀನುಗೊಬ್ಬರ ಮತ್ತು ಪ್ರೆಸ್‌ಮಡ್ ಮುಂತಾದವನ್ನು ಬಳಸಿಕೊಂಡು ದ್ರವಗೊಬ್ಬರಗಳನ್ನು ಅಭಿವರ್ಧಿಸಬಹುದು. ಇವುಗಳಲ್ಲದೆ ಸ್ವಲ್ಪ ಸುಣ್ಣ ಅಥವಾ ಶಿಲಾರಂಜಕವನ್ನು ಸಹ ಬಳಸಬಹುದು. ಮೌಲ್ಯವರ್ಧನೆ ಮಾಡುವುದರ ಮೂಲಕ ದ್ರವ ಗೊಬ್ಬರದ ಸಾರಜನಕವನ್ನು ಶೇ.0.23 ರಿಂದ 1.25 ವರೆಗೂ ಹೆಚ್ಚಿಸಬಹುದು. ದ್ರವ ಗೊಬ್ಬರದ ದ್ರಾವಣ ತಯಾರಾಗುವ ಅವಧಿ ಉಪಯೋಗಿಸುವ ತ್ಯಾಜ್ಯ ವಸ್ತುಗಳ ಮೇಲೆ ಅವಲಂಭಿಸಿರುತ್ತದೆ ಹಾಗೂ ಸುಮಾರು 20 ರಿಂದ 40 ದಿನಗಳಲ್ಲಿ ದ್ರವ ಗೊಬ್ಬರವು ಬಳಸಲು ಸಿದ್ಧವಾಗುತ್ತದೆ. ನಂತರದಲ್ಲಿ ಪ್ರತಿ 15 ದಿನಗಳಿಗೊಮ್ಮೆ ಇದನ್ನು ಬಳಸಬಹುದು. ಕುರಿ ಗೊಬ್ಬರ/ಕೋಳಿ ಗೊಬ್ಬರ/ ಗೋಮೂತ್ರವನ್ನು ಮಿಶ್ರಣ ಮಾಡುವುದರಿಂದ ದ್ರವ ಗೊಬ್ಬರದಲ್ಲಿರುವ ಸಾರಜನಕ, ರಂಜಕ ಮತ್ತು ಪೋಟ್ಯಾಷ್ ಹೆಚ್ಚಿನ ಪ್ರಮಾಣದಲ್ಲಿ ಮೌಲ್ಯವರ್ಧನೆಯಾಗುವುದಲ್ಲದೇ ಲಘು ಪೋಷಕಾಂಶಗಳ ಪ್ರಮಾಣ ಸಹ ಹೆಚ್ಚುತ್ತದೆ.

ಡಾ. ಕೆ.ಪಿ. ರಘುಪ್ರಸಾದ್ ಪ್ರಾಧ್ಯಾಪಕ ಹಾಗೂ ಮುಖ್ಯಸ್ಥರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ

Vijayavani pg 07t

ಭಾರತದ ಮೇಲೆ ಮತ್ತೊಮ್ಮೆ ಕುಲಾಂತರಿ ಬೆಳೆಗಳ ಗುಮ್ಮ

ಕುಲಾಂತರಿ ಬೆಳೆಗಳ ವಿರುದ್ಧ ಭಾರತದಲ್ಲಿ ಬೃಹತ್ ಪ್ರತಿಭಟನೆ ಹಾಗೂ ಕಾನೂನು ಸಂಘರ್ಷಗಳು ನಡೆದ ಇತಿಹಾಸವೇ ಇದೆ. ಕುಲಾಂತರಿ ಬದನೆಕಾಯಿಯನ್ನು ದೇಶಕ್ಕೆ ಪರಿಚಯಿಸುವುದಕ್ಕೆ ಭಾರಿ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ 2010ರಲ್ಲಿ ಕೇಂದ್ರ ಸರ್ಕಾರವೇ ಅದಕ್ಕೆ ತಡೆಯೊಡ್ಡಿತ್ತು. ತದನಂತರದಲ್ಲಿ ಕಾನೂನು ಸಮರದ ಕಾರಣದಿಂದಾಗಿ ಕುಲಾಂತರಿ ಸಾಸಿವೆಯ ಪರಿಚಯಕ್ಕೂ ಬ್ರೇಕ್ ಬಿದ್ದಿತ್ತು. ಇದೀಗ ಭಾರತ- ಅಮೆರಿಕ ನಡುವೆ ವ್ಯಾಪಾರ ಒಪ್ಪಂದಕ್ಕೆ ಮಹೂರ್ತ ಕೂಡಿಬರುತ್ತಿದೆ ಎನ್ನುತ್ತಿರುವಾಗಲೇ, ಮತ್ತೊಮ್ಮೆ ಕುಲಾಂತರಿ ಗುಮ್ಮ ದೇಶದ ರೈತಾಪಿ ವರ್ಗವನ್ನು ಕಾಡಲು ಆರಂಭಿಸಿದೆ. ವ್ಯಾಪಾರ ಒಪ್ಪಂದದ ಭಾಗವಾಗಿ ಕೈಗಾರಿಕಾ ಕ್ಷೇತ್ರದ ವಿಚಾರಗಳಲ್ಲಿ ಎರಡೂ ದೇಶಗಳ ನಡುವೆ ಒಮ್ಮತವೇನೋ ಮೂಡಿದೆ. ಆದರೆ ಕುಲಾಂತರಿ ಬೆಳೆಗಳನ್ನು ಒಳಗೊಂಡ ಕೃಷಿ ಉತ್ಪನ್ನಗಳ ಕುರಿತು ಉಭಯ ದೇಶಗಳ ನಡುವೆ ಹಗ್ಗಜಗ್ಗಾಟ ನಡೆಯುತ್ತಿದೆ. ಅಮೆರಿಕ ಮೂಲದ ಕೆಲವು ಮಾಧ್ಯಮ ಸಂಸ್ಥೆಗಳು ಭಾರತವು ಒತ್ತಡಕ್ಕೆ ಮಣಿದು ಕೆಲವೊಂದು ಕುಲಾಂತರಿ ಬೆಳೆಗಳಿಗೆ ಅನುಮತಿ ನೀಡಬಹುದು ಎಂದು ವರದಿ ಮಾಡುತ್ತಿವೆ. ಇದು ಭಾರತದ ಕೃಷಿ ವಲಯದಲ್ಲಿ ಆತಂಕ ಸೃಷ್ಟಿಗೆ ಕಾರಣವಾಗುತ್ತಿದೆ. ಅದು ಸಹಜ ಕೂಡ.

> ಅಮೆರಿಕ ಮೂಲದ ಕೆಲವು ಮಾಧ್ಯಮ ಸಂಸ್ಥೆಗಳು ಭಾರತವು ಒತ್ತಡಕ್ಕೆ ಮಣಿದು ಕೆಲವೊಂದು ಕುಲಾಂತರಿ ಬೆಳೆಗಳಿಗೆ ಅನುಮತಿ ನೀಡಬಹುದು ಎಂದು ವರದಿ ಮಾಡುತ್ತಿವೆ. ಇದು ಭಾರತದ ಕೃಷಿ ವಲಯದಲ್ಲಿ ಆತಂಕ ಸೃಷ್ಟಿಗೆ ಕಾರಣವಾಗುತ್ತಿದೆ.

ಅಮೆರಿಕ ಹಾಗೂ ಭಾರತದ ಕೃಷಿ ವ್ಯವಸ್ಥೆಯ ನಡುವೆ ಅಜಗಜಾಂತರ ವ್ಯತ್ಯಾಸವಿದೆ. ಭಾರತದ ರೈತರ ಸರಾಸರಿ ಹಿಡುವಳಿ ಪ್ರಮಾಣ ಎರಡೂವರೆ ಎಕರೆ. ಆದರೆ ಅಮೆರಿಕದಲ್ಲಿ ನೂರಾರು ಎಕರೆಯಷ್ಟಿದೆ. ಭಾರತದಲ್ಲಿ ಯಂತ್ರೋಪಕರಣಗಳ ಬಳಕೆವ್ಯಾಪಕವಾಗಿಲ್ಲ. ಅಮೆರಿಕದಲ್ಲಿ ಯಂತ್ರೋಪಕರಣ, ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ಕೃಷಿ ಕ್ಷೇತ್ರದಲ್ಲಿ ಹಾಸುಹೊಕ್ಕಾಗಿದೆ. ಭಾರತದಲ್ಲಿ ಕೃಷಿ ಕ್ಷೇತ್ರದಿಂದ ಜಿಡಿಪಿಗೆ ಶೇ.16ರಷ್ಟು ಕೊಡುಗೆ ಇದ್ದರೂ, 140 ಕೋಟಿ ಜನಸಂಖ್ಯೆ ಪೈಕಿ ಆ ಕ್ಷೇತ್ರದ ಅರ್ಧದಷ್ಟು ಜನರಿಗೆ ಉದ್ಯೋಗ ಕೊಟ್ಟಿದೆ. ಕುಲಾಂತರಿ ಆಹಾರ ಉತ್ಪನ್ನಗಳಿಗೆ ಭಾರತದಲ್ಲಿ ಸದ್ಯ ಅವಕಾಶವಿಲ್ಲ. ಕುಲಾಂತರಿ ಬೆಳೆಗಳು ಬಂದರೆ ಭಾರತದ ಬೀಜ ಸಂಸ್ಕೃತಿಯನ್ನೇ ನುಂಗಿ ನೀರು ಕುಡಿಯಲಿದೆ ಎಂಬ ಆತಂಕ ಮೊದಲಿನಿಂದಲೂ ಇದೆ. ಹೀಗಾಗಿ ಅಮೆರಿಕ ಜತೆಗಿನ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವ ಧಾವಂತದಲ್ಲಿ ಅತಿ ಹೆಚ್ಚು ಜನರ ಜೀವನಾಧಾರವಾಗಿರುವ ಕೃಷಿಗೆ ಸಂಬಂಧಿಸಿದಂತೆ ಆತುರದ ಕ್ರಮ ಸಲ್ಲದು. ಕುಲಾಂತರಿ ತಳಿ, ಅದರಿಂದ ದೇಶದ ಸಣ್ಣ ರೈತರ ಮೇಲಾಗುವ ಪರಿಣಾಮಗಳ ಕುರಿತು ಚರ್ಚೆ, ಅಧ್ಯಯನ, ಸಮಾಲೋಚನೆ ನಡೆಯಬೇಕಿದೆ. ಏನೇ ಹೆಜ್ಜೆ ಇಡುವ ಮೊದಲು ರೈತರ ಕಳವಳವನ್ನೂ ಆಲಿಸಬೇಕಿದೆ.

Kannadaprabha pg 07

Vijayavani pg 07

ನಿಗದಿತ ಗುರಿ ಮುಟ್ಟುವಲ್ಲಿ ಅಧಿಕಾರಿಗಳು ವಿಫಲ **ಖರೀದಿಯಲ್ಲಿ ಹಿಂದುಳಿದ ಆಹಾರ ಇಲಾಖೆ**

ರಾಜ್ಯದಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಗೆ ಗ್ರಹಣ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರೈತರ ಆದಾಯ ಭದ್ರಪಡಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆಗೆ ರಾಜ್ಯದಲ್ಲಿ ಗ್ರಹಣ ಹಿಡಿದಿದೆ. ರಾಜ್ಯದ 6.72 ಲಕ್ಷ ಹೆಕ್ಟೇರ್ ಪ್ರದೇಶಗಳಲ್ಲಿ ರಾಗಿ ಬೆಳೆಯಲಾಗುತ್ತಿದೆ. ತುಮಕೂರು, ರಾಮನಗರ, ಮಂಡ್ಯ, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಹಾಸನ, ಮೈಸೂರು, ಚಿತ್ರದುರ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ರೈತರು ಹಿಂಗಾರಿನಲ್ಲಿ ಹೆಚ್ಚು ರಾಗಿ ಬೆಳೆಯುತ್ತಾರೆ. ದಕ್ಷಿಣ ಕರ್ನಾಟಕ ಭಾಗದ ಜಿಲ್ಲೆಗಳ ರೈತರು, ಮುಂಗಾರು ಮತ್ತು ಹಿಂಗಾರಿನಲ್ಲಿ ಭತ್ತ ಬೆಳೆದರೆ, ಉತ್ತರ ಕರ್ನಾಟಕ ಭಾಗದ ರೈತರು ಬಿಳಿ ಜೋಳ ಬೆಳೆಯುತ್ತಾರೆ. ಯೋಜನೆಯಡಿ ಪ್ರತಿ ವರ್ಷ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಘೋಷಿಸಿ ರಾಗಿ, ಭತ್ತ, ಗೋಧಿ ಸೇರಿ 23ಕ್ಕೂ ಅಧಿಕ ಆಹಾರ ಧಾನ್ಯಗಳನ್ನು ಖರೀದಿ ಕೇಂದ್ರಗಳಲ್ಲಿ ಖರೀದಿಸುವುದು ನಿಯಮ. ಆದರೆ 2024-25ರಲ್ಲಿ ಇಲಾಖೆ 8 ಲಕ್ಷ ಮೆ.ಟನ್ ರಾಗಿ ಪೈಕಿ 3.44 ಲಕ್ಷ ಮೆ.ಟನ್, 2 ಲಕ್ಷ ಮೆ.ಟನ್ ಜೋಳ ಪೈಕಿ 1.70 ಲಕ್ಷ ಮೆ.ಟನ್ ಹಾಗೂ 5 ಲಕ್ಷ ಮೆ.ಟನ್ ಭತ್ತ ಪೈಕಿ ಬರೀ 510 ಮೆ.ಟನ್ ಖರೀದಿಸಿದೆ. ಇದರಿಂದ ನಿಗದಿಪಡಿಸಿದ್ದ ಆಹಾರ ಧಾನ್ಯಗಳನ್ನು



ಸಾಂದರ್ಭಿಕ ಚಿತ್ರ

ಖರೀದಿಸಲು ಅಧಿಕಾರಿಗಳು ವಿಫಲರಾಗಿದ್ದಾರೆ. ಅಲ್ಲದೆ, ಪ್ರಸಕ್ತ ಸಾಲಿನಲ್ಲಿ ಆಹಾರ ಧಾನ್ಯ ಖರೀದಿ ಪ್ರಕ್ರಿಯೆ ನಡೆದಿಲ್ಲ.

ಆರಂಭವಾಗುತ್ತಿಲ್ಲ ಕೇಂದ್ರಗಳು: ಡಿಸಿಗಳ ನೇತೃತ್ವದ ಜಾಗೃತಿ ದಳದ ಸಭೆಯಲ್ಲಿ ಖರೀದಿ ಕೇಂದ್ರಗಳು ಹಾಗೂ ವೇಳಾಪಟ್ಟಿ ಸಿದ್ಧಪಡಿಸಿ ರೈತರ ನೋಂದಣಿಗೆ ಆದೇಶಿಸಲಾಗುತ್ತದೆ. ನಂತರ, ಆಹಾರ ಧಾನ್ಯಗಳ ಖರೀದಿಸುವ ಪ್ರಕ್ರಿಯೆ ಶುರುವಾಗುತ್ತದೆ. ಪ್ರತಿ ಎಕರೆಗೆ 10 ಕ್ವಿಂಟಾಲ್‌ನಂತೆ 50 ಕ್ವಿಂಟಾಲ್‌ವರೆಗೆ ಖರೀದಿಸಲಾಗುತ್ತದೆ. ಆದರೆ, ಸೂಕ್ತ ಸಂದರ್ಭದಲ್ಲಿ ಖರೀದಿ ಕೇಂದ್ರಗಳು ಆರಂಭವಾಗುತ್ತಿಲ್ಲ. ಬೆಲೆ ಕುಸಿತ ಸಂದರ್ಭದಲ್ಲಿ ಖರೀದಿ ಕೇಂದ್ರ ಆರಂಭಿಸಲು ಮೀನಮೇಷ ಎಣಿಸಲಾಗುತ್ತಿದೆ.

ತೂಕದಲ್ಲೂ ವಂಚನೆ: ಧಾನ್ಯ ಮಾರಾಟ ಮಾಡುವ ಸಂದರ್ಭದಲ್ಲಿ ರೈತರಿಗೆ ಪ್ರತಿ ಕ್ವಿಂಟಾಲ್‌ನಲ್ಲಿ 2-5 ಕೆಜಿಯನ್ನು ತೂಕದಲ್ಲಿ ಮೋಸ ಮಾಡುತ್ತಿದ್ದಾರೆ. ಎಲೆಕ್ಟ್ರಾನಿಕ್ ತೂಕದ ಯಂತ್ರ ಸೇರಿ ಇತರ ತೂಕದ ಯಂತ್ರಗಳಲ್ಲಿ ವರ್ತಕರು ರೈತರಿಗೆ ಮೋಸ ಮಾಡುತ್ತಿದ್ದಾರೆ. ಅಲ್ಲದೆ ಭತ್ತ, ರಾಗಿ, ಬಿಳಿ ಜೋಳ ಖರೀದಿ, ದಾಸ್ತಾನು ಮಾಡಿರುವುದು, ಗುಣಮಟ್ಟ, ಸಾಗಣೆ ಮತ್ತು ಖರೀದಿಯಲ್ಲಿ ಸಾಕಷ್ಟು ಅಕ್ರಮ ನಡೆಯುತ್ತಿವೆ.

> ರಾಜ್ಯ ಸರ್ಕಾರ ಕಮಿಷನ್ ಆಸೆಗಾಗಿ 'ಅನ್ನಭಾಗ್ಯ' ಯೋಜನೆಯಡಿ ಅಕ್ಕಿ ಬದಲು ಕಾರ್ಡ್‌ದಾರರಿಗೆ 'ಇಂದಿರಾ' ಕಿಟ್ ನೀಡಲು ಹೊರಟಿರುವುದು ಸರಿಯಲ್ಲ. ಪ್ರತಿ ತಿಂಗಳು ಕಡಿಮೆ ದರದಲ್ಲಿ ಸರ್ಕಾರಕ್ಕೆ ಅಕ್ಕಿ ಒದಗಿಸಲಾಗುತ್ತಿದೆ. 56 ಲಕ್ಷ ಮೆ.ಟನ್ ಆಹಾರ ಧಾನ್ಯ ದಾಸ್ತಾನು ಸಾಮರ್ಥ್ಯವನ್ನು ಎಫ್‌ಸಿಐ ಹೊಂದಿದೆ. ಪ್ರಸ್ತುತ 45 ಲಕ್ಷ ಮೆ.ಟನ್ ದಾಸ್ತಾನು ಮಾಡಲಾಗಿದೆ.
>
> 
>
> ಈರಣ್ಣ ಕಡಾಡಿ ರಾಜ್ಯಸಭಾ ಸದಸ್ಯ

ಖರೀದಿ ಪ್ರಕ್ರಿಯೆ ಎಫ್‌ಸಿಐಗೆ ಒಪ್ಪಿಸಿ

ಸಮರ್ಪಕವಾಗಿ ಆಹಾರ ಧಾನ್ಯ ಖರೀದಿಸಲು ರಾಜ್ಯ ಸರ್ಕಾರ ವಿಫಲವಾಗಿದೆ. ಹಾಗಾಗಿ, ಯೋಜನೆಯಡಿ ಆಹಾರ ಧಾನ್ಯಗಳನ್ನು ಖರೀದಿಸಲು ಸರ್ಕಾರ ಭಾರತೀಯ ಆಹಾರ ನಿಗಮ (ಎಫ್‌ಸಿಐ)ಕ್ಕೆ ಅನುಮತಿ ನೀಡಬೇಕು. ಈ ಬಗ್ಗೆ ಸಚಿವರಿಗೆ ಪತ್ರ ಬರೆಯಲಾಗುವುದು ಎಂದು ಎಫ್‌ಸಿಐ ಕರ್ನಾಟಕ ಘಟಕದ ಸಮಿತಿ ಸದಸ್ಯ ಮತ್ತು ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಹೇಳಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 2012ಕ್ಕಿಂತ ಮುನ್ನ ಎಫ್‌ಸಿಐಯಿಂದ ಖರೀದಿಸಲಾಗುತ್ತಿತ್ತು. 2013ರಿಂದ ರಾಜ್ಯದ ಆಹಾರ ಇಲಾಖೆ, ಮಾರುಕಟ್ಟೆ ಒಕ್ಕೂಟಗಳು ಹಾಗೂ ಕೃಷಿ ಮಾರಾಟ ಇಲಾಖೆ, ವಿವಿಧ ಆಹಾರ ಧಾನ್ಯಗಳನ್ನು ಖರೀದಿಸುತ್ತಿವೆ. ಖರೀದಿ ಪ್ರಕ್ರಿಯೆಯಲ್ಲಿ ಇಲಾಖೆಗಳ ಅಧಿಕಾರಿಗಳು ಹಿಂದುಳಿದಿದ್ದಾರೆ. ಎಂಎಸ್‌ಪಿ ಖರೀದಿಗೆ ಆಯುಕ್ತರನ್ನು ನಿಯೋಜಿಸಬೇಕು. ಪ್ರತಿ ವರ್ಷ ಎಷ್ಟು ಆಹಾರ ಧಾನ್ಯಗಳನ್ನು ಉತ್ಪಾದಿಸಲಾಗುತ್ತದೆ ಎಂಬುದರ ಬಗ್ಗೆ ಕೃಷಿ ಇಲಾಖೆ ಮಾಹಿತಿ ಪಡೆಯಬೇಕು. ಮಾರುಕಟ್ಟೆಗೆ ಆಹಾರ ಧಾನ್ಯಗಳನ್ನು ತರುವ ಮುನ್ನ ಮುಂಚಿತವಾಗಿ ಖರೀದಿ ಕೇಂದ್ರಗಳನ್ನು ತೆರೆಯಬೇಕು. ಇದರಿಂದ ರೈತರಿಗೆ ಅನುಕೂಲವಾಗುತ್ತದೆ ಎಂದು ಹೇಳಿದರು.

ರೈತರ ಬೆಳೆ ಖರೀದಿಗೆ ಎಫ್‌ಸಿಐ ಸಿದ್ಧ

ರಾಜ್ಯ ಸರ್ಕಾರ ಜವಾಬ್ದಾರಿ ವಹಿಸಲು ಈರಣ್ಣ ಕಡಾಡಿ ಮನವಿ

ಸಂ.ಕ. ಸಮಾಚಾರ, ಬೆಂಗಳೂರು

ರೈತರ ಹಿತಾಸಕ್ತಿ ಕಾಪಾಡುವ ಬೆಂಬಲ ಬೆಲೆ ಯೋಜನೆಯಡಿ (ಎಂಎಸ್‌ಪಿ) ರಾಜ್ಯದಲ್ಲಿ ರೈತರು ಬೆಳೆದ ಆಹಾರ ಸಾಮಾಗ್ರಿಗಳನ್ನ ಖರೀದಿಸುವ ಜವಾಬ್ದಾರಿಯನ್ನು ಭಾರತೀಯ ಆಹಾರ ನಿಗಮಕ್ಕೆ ಒಪ್ಪಿಸುವಂತೆ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಮನವಿ ಮಾಡಿದರು.





ಭಾರತೀಯ ಆಹಾರ ನಿಗಮದ ಅಧಿಕಾರಿಗಳ ಜತೆಗೆ ಸಭೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಎಂಎಸ್‌ಪಿ ಬೆಲೆಯಲ್ಲಿ ರೈತರಿಂದ ಬೆಳೆ ಖರೀದಿಸುವ ಪ್ರಕ್ರಿಯೆಯನ್ನು ನಾವೇ ಮಾಡುತ್ತೇವೆಂದು 2012ರಲ್ಲಿ ರಾಜ್ಯ ಸರ್ಕಾರ ಜವಾಬ್ದಾರಿ ತೆಗೆದುಕೊಂಡಿತು. ಆದರೇ ಇದರ ಅನುಷ್ಠಾನ ಯಶಸ್ವಿಯಾಗಿ ಆಗುತ್ತಿಲ್ಲ ಹಾಗಾಗಿ ಈ ಜವಾಬ್ದಾರಿಯನ್ನು ಎಫ್‌ಸಿಐ ಯಶಸ್ವಿಯಾಗಿ ನಿಭಾಯಿಸಲು ಸಿದ್ಧವಿದೆ ಎಂದು ತಿಳಿಸಿದರು.

ಕಳೆದ ಬಾರಿ ಎಂಎಸ್‌ಪಿ ದರದಲ್ಲಿ ಖರೀದಿಸಿದ ಅಂಕಿ ಸಂಖ್ಯೆಗಳನ್ನು ಗಮನಿಸಿದರೇ ರಾಗಿ ಖರೀದಿಸಲು 8 ಲಕ್ಷ ಟನ್ ಗುರಿಯಿಟ್ಟುಕೊಂಡಿದ್ದರು. ಅದರಲ್ಲಿ 3.44 ಲಕ್ಷ ಟನ್ ಖರೀದಿಯಾಗಿದೆ. 2 ಲಕ್ಷ ಟನ್ ಜೋಳ ಖರೀದಿಯಲ್ಲಿ 1.75 ಲಕ್ಷ ಟನ್ ಖರೀದಿ ಹಾಗೂ 5 ಲಕ್ಷ ಟನ್ ಅಕ್ಕಿ ಖರೀದಿಯಲ್ಲಿ 510 ಮೆಟ್ರಿಕ್ ಟನ್ ಖರೀದಿಸಿದ್ದಾರೆ ಎಂದು ವಿವರಿಸಿದರು. ಎಂಎಸ್‌ಪಿ ದರದಲ್ಲಿ ದಾಸ್ತಾನು ಖರೀದಿಸುವ ಅಗತ್ಯ ಸಿದ್ಧತೆ ಹಾಗೂ ಗೋದಾಮುಗಳ ಕೊರತೆಯನ್ನು ರಾಜ್ಯ ಸರ್ಕಾರ ಹೊಂದಿದೆ. ಕೃಷಿ ಇಲಾಖೆಯಿಂದ ಬಿತ್ತನೆಯಾದ ಆಹಾರ ಧಾನ್ಯಗಳ ಮಾಹಿತಿ ಪಡೆದು ಪೂರಕ ಸಿದ್ಧತೆ ಮಾಡಿಕೊಳ್ಳಬೇಕು. ಆಗ ರೈತರು ಹೊರಗಡೆ ಮಾರದೇ ಖರೀದಿ ಕೇಂದ್ರದಲ್ಲೇ ಮಾರಾಟ ಮಾಡಲು ಮುಂದು ಬರುತ್ತಾರೆ ಎಂದರು. ರೈತರ ಬೆಳೆ ಮಾರುಕಟ್ಟೆಗೂ ಬರುವ ಮುನ್ನವೇ ಕೃಷಿ ಇಲಾಖೆಯಿಂದ ಮಾಹಿತಿ ಪಡೆದು ಎಂಎಸ್‌ಪಿ ಕೇಂದ್ರಗಳನ್ನು ತೆರೆದು ಸಮರ್ಪಕವಾಗಿ ಖರೀದಿ ಮಾಡಬೇಕು. ಬೆಂಬಲ ಬೆಲೆಯಲ್ಲಿ ಖರೀದಿ ಮಾಡುವ ವಸ್ತುವಿನ ಬಗೆಗೆ ನಿಗಾ ವಹಿಸಲು ಒಬ್ಬ ಕಮೀಷನರ್ ನೇಮಕ ಮಾಡಬೇಕೆಂದು ಸರ್ಕಾರಕ್ಕೆ ಆಗ್ರಹಿಸಿದರು.

ಇಂದಿರಾ ಕಿಟ್ ಜನ ಹಿತಕಾರಿ ಅಲ್ಲ..!


ಸರ್ಕಾರದ ಯಾವುದೇ ಯೋಜನೆಗಳಾದರೂ ಜನ ಹಿತಕಾರಿ ಆಗಿರಬೇಕೇ ಹೊರತು ಜನಪ್ರಿಯವಾಗಿರಬಾರದು. ಈ ನಿಟ್ಟಿನಲ್ಲಿ ಕಾಂಗ್ರೆಸ್ ಇಂದಿರಾ ಕಿಟ್ ಕೊಡಲು ಚಿಂತಿಸುತ್ತಿರುವುದು ಜನಪ್ರಿಯ ಯೋಜನೆಯಾಗಿದೆ. ಇದು ಸಂಪೂರ್ಣ ವಿಫಲವಾಗುವ ಯೋಜನೆಯಾಗಿದೆ.


ಈ ಕಿಟ್‌ನಲ್ಲಿ 1 ಕೆ.ಜಿ ಸಕ್ಕರೆ, 1 ಕೆ.ಜಿ ಉಪ್ಪು, 1 ಕೆ.ಜಿ. ತೊಗರಿಬೆಳೆ, ಅಡುಗೆ ಎಣ್ಣೆ, 2 ಕೆ.ಜಿ. ಗೋಧಿ, ಟೀ ಹಾಗೂ ಕಾಫೀ ಪುಡಿ ಸೇರಿದಂತೆ ಇತರೆ ಆಹಾರ ದಾಸ್ತಾನುಗಳನ್ನು ಕೊಡಲು ನಿರ್ಧರಿಸಿದ್ದು, ಈ ಯೋಜನೆಯಿಂದ 1 ಲಕ್ಷದಾ 720 ಕೋಟಿ ಉಳಿಸಲು ಹೊರಟಿದೆ.

ಇಷ್ಟೊಂದು ದುಡ್ಡು ಉಳಿಸಿಕೊಳ್ಳುವ ಅಗತ್ಯವಿಲ್ಲ. ಸಂಪೂರ್ಣ ಹಣ ಬಳಸಿಕೊಂಡು ಕಿಟ್‌ನಲ್ಲಿ ಕೊಡಲು ನಿರ್ಧರಿಸಿದ ಸಾಮಗ್ರಿಗಳನ್ನು ಹೆಚ್ಚಿನ ತೂಕದಲ್ಲಿ ಕೊಡಲು ತೀರ್ಮಾನಿಸಬೇಕೆಂದರು.

S-karnatakaPg 08

Eco times Pg 11





STEADY DECLINE IN CEREAL, SHARP RISE IN LIVESTOCK, FISHERIES

VISMAY BASU @ New Delhi

INDIA'S agricultural documented a transformation, as revealed by the recently published Statistical Report on Value of Output from Agriculture and Allied Sectors. Covering the period from 2011-12 to 2023–24, the data outlines a shift away from conventional crop dominance towards a more diversified, high-value, and animal-based production structure.

Cereals remain the backbone, with paddy consolidating its lead—rising from 50.6% to 52.6% of total cereal output. Wheat, however, declined from 35% to 33.0%, especially after 2020–21. Maize saw a modest but clear rise, from 7.7% to 9.3%, suggesting growing use in feed and industrial applications. Coarse cereals like jowar, bajra, and ragi held minor shares, with a declining trend for jowar and ragi, and fluctuating values for bajra. Small millets and other cereals stayed marginal contributors.

The pulse economy, while still gram-dominated, shows signs of diversification. Gram's share slipped from 46% to 42.7%. Arhar, which peaked at 23.1% in 2016–17, dropped to 15.6% in 2023–24. Moong gained steadily, while Urd held stable. Masoor grew slightly. Minor pulses—Horse Gram, Moth, Rajma, Cowpea, and Lakh/Khesri—retained low but steady shares.

Livestock has emerged as the sector's fastest-growing component. Over the decade, milk production rose by 72%, eggs by 84.3%, and meat production more than doubled. Wool output, however, fell by 27.5%. On the other hand, dung, silk, cocoon, and honey production surged by 84.4%, signalling increased rural engagement in non-meat animal products.

Fishing activities also expanded. Inland fishing nearly doubled, rising by 97.73%, while marine fishing recorded an astonishing 176% increase.

